# ಕಳೆದ ಸಂಚಿಕೆಯಲ್ಲಿ...



ಕವನ ಬರೆಯುವುದರಲ್ಲಿ ಆಸಕ್ತಿ ಇದ್ದ ವಿಶಾಲ್‌ನ ಭೇಟಿಯಾಗುತ್ತದೆ ಸುಗಂಧಾಗೆ. ಈಕೆ ಬರೆದ ಕವನಗಳನ್ನು ಪ್ರಶಂಸೆ ಮಾಡಿದಾಗ ಇವಳಿಗೆ ಖುಷಿಯಾಗುತ್ತದೆ. ಮತ್ತೊಮ್ಮೆ ಬ್ಯಾಂಕ್‌ನಲ್ಲಿ ಇಬ್ಬರ ಭೇಟಿಯೂ ಆಗಿ ಮರುದಿನ ಕಾಫಿಗೆ ಹೋಟೆಲ್‌ಗೆ ಕರೆಯುತ್ತಾನೆ. ನಿಗದಿತ ಸಮಯಕ್ಕೆ ಸುಗಂಧಾ ಹೋಟೆಲ್‌ಗೆ ಹೋಗುತ್ತಾಳೆ. ಇಬ್ಬರೂ ಮಾತನಾಡುತ್ತಾ ತಿಂಡಿ ತಿನ್ನುತ್ತಾರೆ. ತಾನು ವಿವಾಹಿತನಾಗಿದ್ದು, ಇಬ್ಬರು ಮಕ್ಕಳಿದ್ದಾರೆ. ಆದರೆ ಸದ್ಯ ಪತ್ನಿ ಜೊತೆಗಿಲ್ಲ ಎಂದು ತನ್ನ ವೈಯಕ್ತಿಕ ವಿವರಗಳನ್ನು ಸುಗಂಧಾಗೆ ತಿಳಿಸುತ್ತಾನೆ. ನಾಟಕ, ಸಿನಿಮಾ ಬಗ್ಗೆ ಇಬ್ಬರೂ ಚರ್ಚಿಸುತ್ತಾರೆ. ಹೀಗೆ ಅನೇಕ ಬಾರಿ ಇಬ್ಬರೂ ಭೇಟಿಯಾಗುತ್ತಾರೆ. ನಂತರ ಪುರಾಣಗಳಲ್ಲಿ ಬರುವ ಶಾಂಡಿಲಿ ಕಥೆ, ಕೌಶಿಕನ ಕಥೆ ಬಗ್ಗೆಯೂ ಮಾತನಾಡುತ್ತಾರೆ.

'ಅವರು ರಿತಿಕ್‌ಗೆ, 'ನೀನು ಅವಳ ಪಾಲನ್ನು ಕೊಡು, ಇಲ್ಲದಿದ್ರೆ ಸುಗಂಧಾ ಕೋರ್ಟ್‌ಗೆ ಹೋದರೆ, ನೀನು ನಿನ್ನ ನೌಕರಿಯನ್ನು ಕಳೆದುಕೊಳ್ಳಬೇಕಾಗುತ್ತೆ' ಎಂದು ತಿಳಿವಳಿಕೆ ಹೇಳ್ತಾರೆ.'

'ನೌಕರಿ ಏಕೆ ಹೋಗುತ್ತೆ?'

'ಏಕೆಂದ್ರೆ ಈಗ ಅವನು ಮದುವೆಯಾಗಿದ್ದಾನೆ. ಮನೆಯ ರಿಜಿಸ್ಟರ್ಡ್ ಪೇಪರ್ಸ್‌ಗಳಲ್ಲಿ ನಿಮ್ಮಿಬ್ಬರ ಹೆಸರು ಗಂಡಹೆಂಡತಿಯೆಂದು ನಮೂದಾಗಿದೆ. ನೀವಿಬ್ಬರು ದೇವಸ್ಥಾನದಲ್ಲಿ ಮದುವೆಯಾಗಿದ್ದಿರಿ, ಇದಕ್ಕೆ ನಾವು ಸಾಕ್ಷಿಯಾಗಿದ್ದೇವೆ. ಅಲ್ಲದೆ ರಿಜಿಸ್ಟರ್ ಆಗುವಾಗ ನೀವಿಬ್ಬರು ಗಂಡಹೆಂಡತಿ ಎಂದು ಸಾಕ್ಷಿಯಾಗಿ ಸಹಿ ಮಾಡಿದ್ದ ಸದಾಶಿವರ ಇಬ್ಬರು ಸ್ನೇಹಿತರು ಸಹ ಇದ್ದಾರೆ. ಇದರರ್ಥ, ರಿತಿಕ್ ಮೊದಲು ನಿನ್ನನ್ನು ಮದುವೆಯಾದ, ನಂತರ ನಿನ್ನಿಂದ ವಿಚ್ಛೇದನ ಪಡೆಯದೆ ಇನ್ನೊಂದು ಮದುವೆಯಾಗಿದ್ದಾನೆ. ಇದು ಹಿಂದೂ ವಿವಾಹ ಅಧಿನಿಯಮದ 420ರ ಸೆಕ್ಷನ್ ಅಡಿಯಲ್ಲಿ ಕಾನೂನು ಬಾಹಿರವಾಗಿದೆ. ಇದು ಅಪರಾಧ. ಇದಕ್ಕೆ ಅವನಿಗೆ ಜೈಲು ಶಿಕ್ಷೆ ಸಹ ಆಗಬಹುದು, ಅವನ ಹೆಂಡತಿ ಸಹ ಅವನನ್ನು ತ್ಯಜಿಸಬಹುದು. ಇದನ್ನೇ ಕಾನೂನಿನ ಯುಕ್ತಿ ಎನ್ನಲಾಗುತ್ತದೆ. ಇದರಲ್ಲಿ ಸದಾಶಿವ ನಿಪುಣ. ರಿತಿಕ್‌ಗೆ ಸ್ವಲ್ಪವಾದರೂ ಬುದ್ಧಿ ಇದ್ದರೆ, ಅವನು ಕೂಡಲೇ ಪಾಲು ಕೊಡ್ತಾನೆ ಅಂತ ಸದಾಶಿವ್ ಹೇಳಿದ್ದಾರೆ', ಕೀರ್ತಿ ಮುಗುಳ್ನಗುತ್ತಾ ಹೇಳಿದಳು.

'ಆದ್ರೆ ನನಗಿವೆಲ್ಲಾ ಬೇಕಿಲ್ಲ. ನಾನು ನನ್ನ ಜೀವನದ ಪುಟಗಳನ್ನು ಮುಚ್ಚಿದ್ದೇನೆ, ಈಗ ಅವುಗಳನ್ನು ಮತ್ತೆ ನಾನು ತೆರೆಯಬೇಕಿಲ್ಲ' ಎಂದೆ. ನಾನು ರಿತಿಕ್‌ಗೆ ಯಾವುದೇ ವಿಧದ ಶಿಕ್ಷೆಯನ್ನು ಕೊಡಲು ಬಯಸುತ್ತಿರಲಿಲ್ಲ. ಅವನು ನನಗೆ ಕೆಡುಕನ್ನು ಮಾಡಿದ್ದ, ಆದ್ರೆ ನನಗೆ ಒಳಿತನ್ನು ಸಹ ಮಾಡಿದ್ದ.

'ಇದೆಲ್ಲವನ್ನು ನಿಜವಾಗಿಯೂ ಮಾಡಬೇಕಿಲ್ಲ, ಅವನಿಗೆ ಹೆದರಿಸುವುದಕ್ಕಷ್ಟೆ! ಅವನು ಇಷ್ಟಕ್ಕೇ ಒಪ್ಪುತ್ತಾನೆ. ನೋಡು ಸುಗಂಧಾ, 'ಸೊಸೆಯನ್ನು ಹೊರಗೆ ಹಾಕುವವರು, ತಿರುಗಿ ತಾವು ಕೊಟ್ಟ ವರದಕ್ಷಿಣೆಯನ್ನು ಏಕೆ ಕೇಳುವುದಿಲ್ಲ?' ಅಂತ ನೀನೇ ಹೇಳ್ತಿದ್ದೆಯಲ್ಲ, ನೀನೂ ನಿನ್ನ ಹಕ್ಕನ್ನು ಕೇಳುತ್ತಿಲ್ಲ' ಎಂದಳು ಕೀರ್ತಿ. ನನ್ನ ಬಗ್ಗೆ ನನಗಿಂತ ಕೀರ್ತಿಗೆ ದುಃಖವಾಗಿತ್ತು.

'ಸರಿ. ನೀನು ಹೇಳಿದ ಮೇಲೆ ಇದಕ್ಕೆ ನನ್ನ ಒಪ್ಪಿಗೆಯಿದೆ, ಆದ್ರೆ ಯಾವುದೇ ಜಗಳ ಹೊಡೆದಾಟ ಆಗಬಾರದು. ಯಾವುದೇ ಕಾನೂನು ಜಂಜಾಟ ಬೇಡ', ನಾನು ಕೀರ್ತಿಗೆ ನನ್ನ ಪರವಾಗಿ ಹೋರಾಡುವ ಅಧಿಕಾರವನ್ನು ಕೊಡುತ್ತಾ ಹೇಳಿದೆ.

'ಇದಪ್ಪಾ! ಜಗಳದ ಸಂದರ್ಭವೇ ಬರಲ್ಲ, ನೀನು ನಿಶ್ಚಿಂತೆಯಿಂದಿರು', ಕೀರ್ತಿ ಸಂತಸದಿಂದ ಹೇಳಿದಳು, 'ಈಗ ನೋಡುವಿಯಂತೆ, ಸದಾಶಿವನ ಕೈಚಳಕ'.

'ಒಂದ್ ವಿಷಯ ಹೇಳು'

'ಹೂಂ, ಕೇಳು'


'ಒಂದು ವೇಳೆ ರಿತಿಕ್ ಮದುವೆ ಮಾಡಿಕೊಳ್ಳುವುದಕ್ಕೆ ಮೊದಲು, ನಾನು ಬೇರೆಯವನನ್ನು ಮದುವೆಯಾಗಿದ್ದರೆ ಅವನೂ, ನಾನು ನನ್ನ ಪಾಲನ್ನು ಬಿಡಬೇಕೆಂದು ನನಗೆ ಇಂಥ ಒತ್ತಡವನ್ನು ಹಾಕುತ್ತಿರಲಿಲ್ಲವೇ?' ನನ್ನ ಮನಸ್ಸಿಗೆ ಅನ್ನಿಸಿದ್ದನ್ನು ಕೀರ್ತಿಯ ಎದುರಿಗಿಟ್ಟೆ.

'ಖಂಡಿತ! ನಿನ್ನನ್ನು ಮನೆಯಿಂದ ದೂರ ಮಾಡಲು ಅವನಿಗೆ ಒಂದು ಸುವರ್ಣಾವಕಾಶ ಸಿಗುತ್ತಿತ್ತು' ಎಂದಳು ಕೀರ್ತಿ.

'ಇಲ್ಲ, ರಿತಿಕ್ ಬಹುಶಃ ಹೀಗೆ ಮಾಡುತ್ತಿರಲಿಲ್ಲ'.

'ಇದು ನಿನ್ನ ಭ್ರಮೆ. ದುರಾಸೆ ಕೆಟ್ಟದ್ದು, ಸುಗಂಧಾ! ಒಂದು ವೇಳೆ ಅವನಿಗೆ ದುರಾಸೆ ಇಲ್ಲದಿದ್ದರೆ, ಅವನು ಎರಡು ಕೋಣೆಯ ಮನೆಯಲ್ಲಿಯೇ ನಿನ್ನೊಂದಿಗೆ ಗೃಹಸ್ಥ ಜೀವನವನ್ನು ನಡೆಸುತ್ತಿದ್ದ, ಅಷ್ಟು ದೊಡ್ಡ ಮನೆಯನ್ನು ಖರೀದಿಸುತ್ತಿರಲಿಲ್ಲ, ಅದೂ ನಿನ್ನಿಂದ ಅರ್ಧ ಹಣವನ್ನು ತೆಗೆದುಕೊಂಡು. ನಿನಗೆ ಲೋಕವ್ಯವಹಾರದ ಜ್ಞಾನವಿಲ್ಲ. ಸಂಬಂಧಿಕರಲ್ಲಿ ಇಂಥ ಡೋಂಗಿತನ, ಷಡ್ಯಂತ್ರಗಳು ನಡೆಯುತ್ತಿರುತ್ತವೆ' ಎಂದಳು ಕೀರ್ತಿ.

ಕೀರ್ತಿ ನಿಜವನ್ನೇ ಹೇಳುತ್ತಿದ್ದಳು. ಅಪ್ಪನಿಂದ ಬೇರೆಯಾದ ನಂತರ ಅಮ್ಮನ ಸಾಮಾಜಿಕ ವೃತ್ತ ಮುದುಡುತ್ತಾ ಹೋಯಿತು. ಹೀಗಾಗಿ ನಾನು ಸಹ ಸಂಬಂಧಿಕರು, ಬಂಧುಬಾಂಧವರಿಂದ ದೂರವಾಗುತ್ತಾ ಹೋದೆ. ಈಗ ಯಾರಾದರು ಸೋದರ ಮಾವ, ಷಡ್ಡಕ ಮುಂತಾದ ಸಂಬಂಧಗಳ ಬಗ್ಗೆ ಹೇಳಿದರೆ, ಸೋದರ ಮಾವ ಎಂದು ಯಾರಿಗೆ ಹೇಳುತ್ತಾರೆ? ಷಡ್ಡಕ ಎಂದು ಯಾರಿಗೆ ಹೇಳುತ್ತಾರೆ? ಎಂದು ಯೋಚಿಸುತ್ತೇನೆ.



ಸಂಬಂಧಗಳಿಲ್ಲದೆ ಬದುಕುವುದು ಸಾಧ್ಯವೇ? ಆದರೆ ನಾನು ಬದುಕುತ್ತಿದ್ದೇನಲ್ಲ!

ಸಂಬಂಧಗಳಿರುವುದು ಮತ್ತು ಸಂಬಂಧಗಳು ಇಲ್ಲದಿರುವುದು ಇವುಗಳ ನಡುವೆ ನಾನು ಭ್ರಮೆಗೊಳಗಾಗುತ್ತೇನೆ. ಕೀರ್ತಿ ನನ್ನೆದುರು ಅನೇಕ ಪ್ರಶ್ನೆಗಳನ್ನು ಬಿಚ್ಚಿಟ್ಟಳು, ಅವುಗಳಿಗೆ ನನ್ನಿಡೀ ಜೀವನದಲ್ಲಿ ಉತ್ತರವನ್ನು ಬಹುಶಃ ಪಡೆಯಲಾರೆ ಅಥವಾ ಪಡೆಯುತ್ತೇನೆ ಎಂಬುದು ತಿಳಿದಿಲ್ಲ. ನಾಲ್ಕು ದಿನಗಳ ನಂತರ ಕೀರ್ತಿ ಮರಳಿ ಜಬಲಪುರಕ್ಕೆ ಹೊರಟು ಹೋದಳು. ಅವಳು ಹೋದ ಎರಡು ದಿನಗಳ ನಂತರ ಅಕಸ್ಮಾತ್ ರಿತಿಕ್ ನನ್ನೆದುರು ಬಂದು ನಿಂತ. ಎದುರಿಗೆ ಅವನನ್ನು ನೋಡಿ ಕಕ್ಕಾಬಿಕ್ಕಿಯಾದೆ. ನನ್ನನ್ನು ನಾನು ಸಂಭಾಳಿಸಿಕೊಂಡ ನಂತರ, ಅವನು ತುಂಬಾ ರೇಗಿದ್ದಾನೆ ಎಂಬುದು ತಿಳಿಯಿತು.

'ಒಂದು ವೇಳೆ ನಿನಗೆ ಪಾಲು ಬೇಕೆಂದಿದ್ದರೆ, ನಿನ್ನ ಗೆಳೆಯನನ್ನು ನನ್ನ ಹತ್ರ ಏಕೆ ಕಳುಹಿಸಿದೆ? ನೀನೇ ಹೇಳಬಹುದಿತ್ತಲ್ಲ?' ಅವನು ಅಪಶಬ್ದಗಳನ್ನು ಹೇಳಿದ.

'ನಾನು ಯಾರನ್ನೂ ಕಳುಹಿಸಿಲ್ಲ'. ಅವನ ಆರೋಪ ಕೇಳಿ ಮನಸ್ಸಿಗೆ ಬೇಸರವಾಯಿತು. ಆಗ ನಾನು ನನ್ನ ಕಚೇರಿಯ ಕುರ್ಚಿಯಲ್ಲಿ ಕೂತು ಕೆಲಸ ಮಾಡುತ್ತಿದ್ದೆ. ನಾನು ಅತ್ತಇತ್ತ ದೃಷ್ಟಿ ಹರಿಸಿದೆ. ಬೇರೆಯವರ ಕುರ್ಚಿಗಳು ನನ್ನಿಂದ ದೂರವಿದ್ದವು, ಆದರೆ ಅವರ ಗಮನ ನಮ್ಮಿಬ್ಬರ ಮೇಲೇ ಕೇಂದ್ರೀಕೃತವಾಗಿತ್ತು. ಬಹುಶಃ ಅವರು ರಿತಿಕ್‌ನ ಆಕ್ರಮಣಕಾರಿ ಮುಖವನ್ನು ನೋಡಿದ್ದರು.

'ಈಗ ಸುಳ್ಳು ಹೇಳ್ತಿದ್ದೀಯ? ನಾನು ನಿನ್ನಿಂದ ಬೇರೆಯಾದದ್ದು ಒಳ್ಳೆಯದಾಯಿತು... ತಗೋ, ಒಂದು ಲಕ್ಷ ರೂಪಾಯಿ ಚೆಕ್, ಉಳಿದುದ್ದನ್ನು ನಾನು ಆಗಾಗ ಕೊಡ್ತೀನಿ'. ಅವನು ಚೆಕ್ಕನ್ನು ನನ್ನ ಮೇಲೆ ಒಗೆದ.

'ಇದೆಂಥ ವಿಧಾನ! ಶಾಂತಿಯಿಂದ ಕೂರು, ಶಾಂತಿಯಿಂದ ಮಾತಾಡು! ನೀನೀಗ ನನ್ನ ಕಚೇರಿಯಲ್ಲಿದ್ದೀಯ, ನಿನ್ನ ಮನೆಯಲ್ಲಿಲ್ಲ', ನಾನು ಧೈರ್ಯದಿಂದ ಹೇಳಿದೆ.

(ಸಶೇಷ)